ಲಕ್ಕವ್ವ ಮಗ್ಗುಲು ಬದಲಿಸಿದಳು. ಲಂಬಾಣಿಗುಡ್ಡದಲ್ಲಿ ಆಡಿ ಬೆಳೆದ ಲಕ್ಕವ್ವ ಈ ತಾಂಡಾಗೆ ಭರಮನ ಕೈ ಹಿಡಿದು ಬಂದು ಹತ್ತತ್ರ ಮೂವತ್ತು ವರ್ಷಗಳಾಗಿವೆ. ಭರಮನಿಗಿಂತ ಹತ್ತು ವರ್ಷ ಸಣ್ಣದಾಗಿ ಕಾಣುವ ಲಕ್ಕವ್ವ, ಎಣ್ಣೆಗೆಂಪು ಮುಖದಲ್ಲೂ ಚೆಂದ ಕಾಣಿಸುತ್ತಾಳೆ. ಹೊಗೆಸೊಪ್ಪಿಗೆ ಅವಳ ಹಲ್ಲುಗಳು ಹಳದಿಯಾಗಿವೆ, ವಯೋಸಹಜ ಬೊಜ್ಜು ಬೆಳೆದಿದೆ.

ಸಾಕಮ್ಮ ಇನ್ನೂ ನಿದ್ದೆ ಮಾಡದೇ ಮನೆಯ ಮಾಡನ್ನು ನೋಡುತ್ತಿದ್ದಳು. ಬಲಗಡೆ ಮಲಗಿದ್ದ ಕಿರಿಮಗಳು ರಾಜೀ ಇದ್ಯಾವುದರ ಚಿಂತೆಯಿಲ್ಲದೆ ಗೊರಕೆ ಹೊಡೆಯಕ್ಕತ್ತಿದ್ದಳು.

ಪೇಟೆಯ ಟೈಲರ್ ಶಾಪಿಗೆ ಬೇಗ ಹೋಗೋದು, ಲೇಟಾಗಿ ಬರೋದು. ಗೆಳತಿಯರ ಎಲ್ಲ ಮದುವೆಗಳಿಗೆ ಎರಡೆರಡು ದಿನಕ್ಕೆ ಇದ್ದು ಬರೋದು. ಹೊತ್ತಲ್ಲದ ಹೊತ್ತಲ್ಲಿ ಫೋನ್ ನೋಡೋದು, ಸ್ನಾನದ ಮನೆಗೂ ಫೋನ್ ಹಿಡಿದು ಹೋಗೋದು, ಕಿಲ ಕಿಲ ಕಿಸಿಯೋದು ಇದೆಲ್ಲ ಕಂಡ ಲಕ್ಕವ್ವನಿಗೆ ಸಾಕಮ್ಮಳ ಪ್ರೀತಿಯ ವಾಸನೆ ಯಾವಾಗಲೋ ಬಡಿದಿತ್ತು. ಯಾವಾಗ ಭರಮ ದಿನಕ್ಕೆ ಹತ್ತು ಸಲ ಸಾಕಮ್ಮಳ ಬಗ್ಗೆ ಕೇಳಲಿಕ್ಕೆ ಶುರು ಮಾಡಿದನೋ 'ಇದೆಲ್ಲ ಎಲ್ಲಿಗೆ ತಗೊಂಡು ಹೋತದೋ ಶಿವ!' ಎಂದು ಭಯವಾಗುತ್ತಿತ್ತು.

ಪಕ್ಕದೂರಿನ ಸೀತವ್ವನ ಮೇಲೆ ಬರ್ತಿದ್ದ ಚೌಡಮ್ಮನಿಗೆ ಇವೆಲ್ಲ ಹೇಳಿ ಅತ್ತಿದ್ದಳು. ದೇವರ ನುಡಿಯಂತೆ ಸಾಕಮ್ಮಳನ್ನು ಕರೆದುಕೊಂಡು ಹೋಗಿ ಅವಳ ಬಟ್ಟೆ ಮೇಲೆ ನೀರು ಹಾಕಿಸಿ, ದೇವಿ ಮಂತ್ರಿಸಿ ಕೊಟ್ಟ ನಿಂಬೆಹಣ್ಣನ್ನು ಸಾಕಮ್ಮ ಮಲಗುವ ದಿಂಬಿನಡಿಟ್ಟಿದ್ದಳು. ಆದರೂ ಯಾವ ಬದಲಾವಣೆ ಕಾಣದೇ ಯಾಕೋ ಇದೆಲ್ಲ ಸರಿ ಆಗ್ತಿಲ್ಲ ಎಂದು ಲಕ್ಕವ್ವನಿಗೆ ಆಗಾಗ್ಗೆ ದಿಗಿಲಾಗ್ತಾ ಇತ್ತು. ನಿದ್ದೆ ಬರದೇ ನಿದ್ದೆ ಮಾಡಲಾಗದೇ ಅವ್ವ ಬಲಕ್ಕೂ ಎಡಕ್ಕೂ ಮಗ್ಗುಲ ಬದಲಿಸಿಕೊಂಡು ಹೊರಳಾಡುವುದನ್ನು ಸದ್ದಿನಿಂದಲೇ ಗ್ರಹಿಸಿದ ಸಾಕಮ್ಮಳಿಗೆ ಅವ್ವನ ಸ್ಥಿತಿ ಕಂಡು ಕರುಳು ಚುರುಕ್ ಅಂತು. ಕಷ್ಟಪಟ್ಟ ಜೀವ ಅದು, ಜೊತೆಗೆ ನಾನು ಬೇರೆ ಇಷ್ಟೆಲ್ಲಾ ಕಷ್ಟ ಕೊಡುತ್ತಿದೆನಲ್ಲ ಎಂದು ಇನ್ನಷ್ಟು ಬೇಜಾರಾಯ್ತು.

ಇಪ್ಪತ್ತೆರಡು ಮುಟ್ಟಿದ ಸಾಕಮ್ಮ ತಾಂಡಾದ ಬೆರಳೆಣಿಕೆಯ ಹುಡುಗಿಯರಲ್ಲಿ ಒಬ್ಬಳು. ಹತ್ತು ವರ್ಷದ ಹಿಂದೆಯೇ ಮೈನೆರೆದು, ನೋಡ ನೋಡುತ್ತಲೇ ಮೈ ಕೈ ತುಂಬಿಕೊಂಡು, ಒಂದು ಚೆಂದದ ಹುಡುಗಿಗೆ ಬೇಕಾದ ಎಲ್ಲ ಅಂಕುಡೊಂಕುಗಳನ್ನು ನೈಸರ್ಗಿಕವಾಗಿಯೇ ದಕ್ಕಿಸಿಕೊಂಡಿದ್ದಳು.

ಅಪ್ಪಯ್ಯನಿಗೆ ನಂದೀಶನ ಜೊತೆ ಓಡಾಡೋದು ಗೊತ್ತಾದ ಮೇಲೆ ಅವನು ಮಾತು ಬಿಟ್ಟಿದ್ದು ನೆನೆದು 'ತಾನು ಮಾಡುತ್ತಿರುವುದು ಸರಿಯಾ? ತಪ್ಪಾ?' ಎಂದು ಕಣ್ಣುಬಿಟ್ಟುಕೊಂಡೇ ಕೇಳಿಕೊಂಡಳು. ನಂದೀಶನ ಜೊತೆ ಮದುವೆಯಾಗದಿದ್ದರೆ ಅಪ್ಪಯ್ಯ ಅವ್ವ ಸೇರ್ಕಂಡ್ ತನಗಿಂತ ಹತ್ತಿಪ್ಪತ್ತು ವರ್ಷ ದೊಡ್ಡವನಿಗೆ ಮದುವೆ ಮಾಡಿ ಸಾಗಾಕ್ತಾರೆ. ನನ್ನ ಬದುಕಿಗೂ ಅವ್ವನ ಬದುಕಿಗೂ ಅಷ್ಟೇನೂ ವ್ಯತ್ಯಾಸ ಇಲ್ಲದೆ ತಾನು ಈ ನಾಲ್ಕು ಗುಡ್ಡಗಳ ನಡುವೆಯೇ ಬದುಕಬೇಕಾಗುತ್ತೆ, ಒಂದು ಚೆಂದದ ಬದುಕು ಕಟ್ಟಿಕೊಳ್ಳುವ ತನ್ನ ನಿರ್ಧಾರ ಸರಿಯಿದೆ ಎಂದು ಕಣ್ಣು ಮುಚ್ಚಿ ಮಲಗಲು ಪ್ರಯತ್ನಿಸುತ್ತಲೇ ನಿದ್ರೆಗೆ ಜಾರಿದಳು.

ಗುಡ್ಡದ ಮೇಲಿಂದ ಶರೀಫಜ್ಜ 'ಹ್ಯಾಗಿರಿ ಬ್ಯಾಗಿರಿ ಹೇಗಿರಬೇಕು, ಜಂತಾನು ಹುಡುಗ ಜೊತೆಗಿರಬೇಕು...' ಎಂದು ಹಾಡುತ್ತಿದ್ದರು.

***

ಭರಮನಿಗೆ ಎಚ್ಚರವಾಗುವಷ್ಟರಲ್ಲಿ ಬೆಳಕು ಹರಿದಿತ್ತು, ಇವತ್ತು ಎದ್ದವನಿಗೆ ಊರ ಒಳಕ್ಕೆ ಹೋಗಲು ಆಸಕ್ತಿಯಿರಲಿಲ್ಲ. ವಾರದಿಂದ ಯಾಕೋ ಏನೋ ಅನಾಹುತ ಜರುಗುತ್ತದೆ ಎಂಬುದು ಮನಸಲ್ಲಿ ಕುಳಿತಿತ್ತು. ಹದಿನೈದು ದಿವಸದ ಹಿಂದೆ ಊರಿಗೆ ಬಂದ ಸಾಬರ ಕಡೆಯವನ ಜೊತೆ ದೇವೀರಿ ಓಡಿ ಹೋಗಿದ್ದು, ವಿಷಯ ತಿಳಿದು ದೇವೀರಿಯನ್ನು ವಾಪಸ್ ಕರೆದು ತಂದು ಛೀಮಾರಿ ಹಾಕಿ ದಂಡ ಕಟ್ಟಿಸಿಕೊಂಡದ್ದು, ಪ್ರೀತಿ ವಿಷಯಕ್ಕೆ ಧರ್ಮದ ಸೋಂಕು ಬಡಿದು ಆ ಸಾಬರ ಕಡೆಯವನನ್ನ ಬೆತ್ತಲಾಗಿ ಮರಕ್ಕೆ ಕಟ್ಟಿ ಹೊಡೆದ ಸುದ್ದಿ ಪೇಪರಲ್ಲಿ ಬಂದು ತಾಂಡಾದ ಎಲ್ಲರ ಬಾಯಲ್ಲಿ ಹರಿದಾಡಿದ್ದು ಎಲ್ಲವೂ ನೆನ್ನೆ ಮೊನ್ನೆ ನಡೆದಂತಿದ್ದು ಸಾಕಮ್ಮ ಯಾವುದೋ ಜನಿವಾರದ ಹುಡುಗನ ಜೊತೆ ಓಡಾಡುತ್ತಿರುವ ವಿಷಯ ತಿಳಿದ ಮೇಲೆ ಹಾವು ಹರಿದಂತೆ ಒದ್ದಾಡುತ್ತಿದ್ದ.

ಭರಮ ಎದ್ದಿದ್ದು ಗೊತ್ತಾಗಿ ಚಿಕ್ಕ ಪಾತ್ರೆ ಇಟ್ಟು ನೀರು ಕುದಿಸಿ ಚಾ ಪುಡಿ ಸುರಿದು ಸ್ವಲ್ಪ ಹಾಲು ಹಾಕಿ ಎರಡೇ ನಿಮಿಷಕ್ಕೆ ಬಣ್ಣ ರುಚಿ ಶಕ್ತಿ ಕಳಕೊಂಡ ಟೀ ತಂದು ಅವನ ಕೈಗಿಟ್ಟಳು. ಭರಮ ಪಕ್ಕದಲ್ಲಿದ್ದ ಚೊಂಬಿನಲ್ಲಿ ಉಳಿದಿದ್ದ ನೀರು ಕುಡಿದು ಅದನ್ನೇ ಬಾಯಿ ಮುಕ್ಕಳಿಸಿ ಉಗಿದು 'ಎದ್ಲಾ ಸಾಕಿ?' ಎಂದು ಕೇಳಿದ. ಅದಕ್ಕೆ ಲಕ್ಕವ್ವ 'ಎದ್ದು ಆಗಲೇ ಕೆಲಸಕ್ಕೆ ಹೋದ್ಲು' ಎಂದಳು. ಭರಮನಿಗೆ ದಿಗಿಲಾಯ್ತು. ಅವನ ದಿಗಿಲಿಗೆ ಮುಖ್ಯ ಕಾರಣ ಸಾಕಮ್ಮ ಎಂದೂ ಇಷ್ಟು ಬೇಗ ಕೆಲಸಕ್ಕೆ ಹೋದವಳಲ್ಲ. ಅದೇ ಸಮಯಕ್ಕೆ ಭರಮನ ಎಡಗಣ್ಣು ಹೊಡೆದುಕೊಳ್ಳಲು ಶುರುವಾಗಿ ಎಂತಹುದೋ ಅನಿಷ್ಟದ ಸೂಚನೆ ಸಿಕ್ಕಿ ಬಚ್ಚಲಿಗೆ ದೌಡಾಯಿಸಿದ.

ಮುಖಕ್ಕೆ ನೀರು ಸಿಡಿಸಿಕೊಂಡು ಒರೆಸಿಕೊಂಡು ಕಾಲೇಜಿಗೆ ಹೊರಡುತ್ತಿದ್ದ ರಾಜೀ ಜೊತೆ ತಾನು ಪೇಟೆಗೆ ಬರುವುದಾಗಿ ಬಸ್ ಹತ್ತಿ ಕೂತ. ಅಪ್ಪನ ಮುಖದಲ್ಲಿ ಎಂದೂ ಕಾಣದ ಗಾಬರಿಯೊಂದು ರಾಜಿಗೆ ಕಂಡು ಕಳೆದ ಕೆಲವು ದಿನಗಳಿಂದ ನಡೆಯುತ್ತಿರುವ ಕಳವಳದ ಗಳಿಗೆಗಳು ನೆನಪಾದವು. ಅವಳ ವಯಸ್ಸಿಗೆ ಹೆಚ್ಚು ಕಮ್ಮಿ ಎಲ್ಲವೂ ಅರ್ಥವೂ ಆಗಿತ್ತು. ಅಪ್ಪನ ಗಾಬರಿ ಹೊತ್ತ ಮುಖ ಕಂಡು ಅವಳಿಗೆ ಪಿಚ್ಚೆನಿಸಿತು. ಎಲ್ಲವೂ ಸರಿ ಹೋದರೆ ಸಾಕು ಎಂದುಕೊಂಡಳು.

